**ಸಾಕ್ಷಿಗೆ ದಿನಾಂಕಃ08-07-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಪ್ರತಿವಾದಿ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | ಇದೇ ನ್ಯಾಯಾಲಯದ ಅಸಲು ದಾವಾ 25/2023 ಕ್ಕೆ ಸಂಬಂಧಪಟ್ಟಂತೆ ನಿಪಿ1 ರಿಂದ 12 ರ ದೃಡೀಕೃತ ನಕಲುಗಳನ್ನು ಒಟ್ಟಾಗಿ | Ex.D-1 |

ಆದುದರಿಂದ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀ ಸವಾಲು :: ವಾದಿ ಪರ ಶ್ರೀ. BNK ವಕೀಲರಿಂದ ::**

ಸರ್ವೇ ನಂಬರ್ 184 ರಲ್ಲಿನ 2 ಎಕರೆ 30 ಗಂಟೆ ಸ್ವತ್ತನ್ನು ನನ್ನ ತಮ್ಮ ಖರೀದಿ ಮಾಡಿರುತ್ತಾರೆ. ವಾದಿಗಳ ಹಾಗೂ ನಮ್ಮ ಸ್ವತ್ತಿನ ಮೂಲ ಸರ್ವೇ ನಂಬರ್ ಒಂದೇ ಆಗಿರುತ್ತದೆ. ವಾದಿಗಳಿಗೆ ಸೇರಿದ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ಅಸಲು ದಾವಾ 305/2022 ರಲ್ಲಿ ನಾನಾಗಲೀ ಅಥವಾ ನನ್ನ ತಮ್ಮ ಪ್ರತಿವಾದಿಯಾಗಲೀ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ನಮಗೆ ಹಾಗೂ ಸದರಿ ದಾವೆಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಅಸಲು ದಾವಾ 305/2022 ರ ದಾವೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ದಾವೆಯು ಈಗ ಗುರುಮೂರ್ತಿ ರವರ ಸಾಕ್ಷಿ ವಿಚಾರಣೆ ಹಂತದಲ್ಲಿ ಇರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ದಾವೆಯ ವಾದಿಯ ವಿಚಾರಣೆ ಮುಗಿದಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ವಾದಿಗಳು ಅವರ

ಸ್ವತ್ತನ್ನು ನಾವು ಒತ್ತುವರಿ ಮಾಡಿರುವುದಾಗಿ ಹೇಳಿದ್ದು, ಒತ್ತುವರಿ ತೆರವುಗಾಗಿ ಹೂಡಿರುತ್ತಾರೆ ಎಂದರೆ ಸರಿ. ದಾವಾ ಪೂರ್ವದಲ್ಲಿ ಮಾಡಿರುವ ಹದ್ದುಬಸ್ತುಗೆ ಸಂಬಂಧಪಟ್ಟಂತೆ ನಾವುಗಳು DDLR and JDLR ರವರ ಸಮಕ್ಷಮ ಮೇಲ್ಮನವಿ ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ದಾಖಲಾತಿಗಳು ನನ್ನ ಬಳಿ ಇದ್ದು ಅದನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. DDLR and JDLR ರವರ ಸಮಕ್ಷಮ ಇರುವ ಪ್ರಕರಣಗಳು ನನ್ನ ಪ್ರಕಾರ ಈ ದಾವೆ ಮುಗಿಯವವರೆಗೂ ವಿಲೇ ಇಡಲಾಗಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿರುವ ಅಳತೆ ಕಾನೂನು ಬದ್ದವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಳತೆಗಳ ಪ್ರಕಾರ ಒತ್ತುವರಿ ಜಮೀನು ಬಿಟ್ಟು ಕೊಡಬೇಕಾಗುತ್ತದೆ ಎನ್ನುವ ದುರುದ್ದೇಶದಿಂದ ಸುಳ್ಳು ಕತೆ ಕಟ್ಟಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.

ತರೀಕೆರೆ.

ಸಾಕ್ಷಿಯ ಸಹಿ: